RNU AIR DHARWAD

# SEPTEMBER 09, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **58ನೇ ವಿಶ್ವ ಸಾಕ್ಷರತಾ ದಿನಾಚರಣೆ; ಪ್ರತಿಯೊಬ್ಬರು ಕನಿಷ್ಠ ಓರ್ವರನ್ನು ಸಾಕ್ಷರರಾಗಿಸೋಣ – ಜಗದೀಪ್ ಧನಕರ್, ಕರೆ.**
- **ಅಪ್ಪಿಕೋ ಆಂದೋಲನದ ಧ್ಯೇಯ; ಪರಿಸರ ಉಳಿಸು, ಬೆಳೆಸು ಹಾಗೂ ಮಿತವಾಗಿ ಬಳಸು – ಗುಬ್ಬಿಗದ್ದೆ ಮಹಾಬಲೇಶ್ವರ ಹೆಗಡೆ.**
- **ಕಲ್ಯಾಣ ಚಾಲುಕ್ಯರ ಶಿಲ್ಪಕಲೆಯ, ಗದಗ ಜಿಲ್ಲೆ ಲಕ್ಕುಂಡಿ ಗ್ರಾಮದ, ಅಭಿವೃದ್ಧಿಗೆ ಸರ್ಕಾರ ಬದ್ಧ – ಎಚ್.ಕೆ.ಪಾಟೀಲ.**
- **ಸಂಪೂರ್ಣತಾ ಅಭಿಯಾನ; ಕಲಬುರಗಿ ಜಿಲ್ಲೆಯ ಕಾಳಗಿಯಲ್ಲಿ, 4 ವಿಭಾಗಗಳಲ್ಲಿ 100ರಷ್ಟು, ಪ್ರಗತಿ ಸಾಧನೆ.**

<><><>

**ಈಗ ವಾರ್ತೆಗಳ ವಿವರ**

<><><>

ಪ್ರತಿಯೊಬ್ಬರೂ ಕನಿಷ್ಟ ಒಬ್ಬರನ್ನು ಸಾಕ್ಷರರನ್ನಾಗಿಸುವ ಸಂಕಲ್ಪ ಮಾಡಬೇಕು ಎಂದು, ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಕರೆ ನೀಡಿದ್ದಾರೆ. ದಿಲ್ಲಿಯ ವಿಜ್ಞಾನ ಭವನದಲ್ಲಿ ಆಯೋಜಿಸಲಾಗಿದ್ದ, 58ನೇ ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡು ಮಾತನಾಡಿದರು. ಸುಶಿಕ್ಷಿತ ಸಮಾಜ, ಸ್ವಾತಂತ್ರ್ಯವನ್ನು ಪ್ರಜ್ಞಾಪೂರ್ವಕವಾಗಿ ಬಳಸಿಕೊಳ್ಳುವ ಮೂಲಕ, ದೇಶ ನಿರ್ಮಾಣ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತದೆ ಎಂದರು.

<><><>

58ನೇ ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯನ್ನು, ‘ಬಹುಭಾ ಾ ಶಿಕ್ಷಣವನ್ನು ಉತ್ತೇಜಿಸುವುದು: ಪರಸ್ಪರ ತಿಳಿವಳಿಕೆ ಮತ್ತು ಶಾಂತಿಗಾಗಿ ಸಾಕ್ಷರತೆ’ ಎಂಬ ಧ್ಯೇಯದಡಿ, ಆಚರಿಸಲಾಯಿತು. 1967 ರಿಂದ, ಸಾಕ್ಷರತೆ ಪ್ರಮಾಣ ಹೆಚ್ಚಿಸಿ, ನ್ಯಾಯಯುತ, ಶಾಂತಿಯುತ ಮತ್ತು ಮಾನವ ಸಂಪನ್ಮೂಲದ ಸುಸ್ಥಿರ ಅಭಿವೃದ್ಧಿ ಸಾಧಿಸಲು, ಸಾಕ್ಷರತಾ ದಿನಾಚರಣೆ ಆಯೋಜಿಸಲಾಗುತ್ತಿದೆ. ಸಾಕ್ಷರತೆ ಮೂಲಭೂತ ಮಾನವ ಹಕ್ಕು. ಇತರೆ ಮಾನವ ಹಕ್ಕುಗಳು, ಸ್ವಾತಂತ್ರ್ಯ

ಮತ್ತು ಜಾಗತಿಕ ಪೌರತ್ವವನ್ನು ಆನಂದಿಸಲು ಇರುವ ಹೆಬ್ಬಾಗಿಲು. ವಿಶ್ವಾದ್ಯಂತ 6 ರಿಂದ 18 ವ ರ್ಷ ವಯಸ್ಸಿನ, ಸುಮಾರು 250 ಮಿಲಿಯನ್ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ನಾಗರಿಕ ಸಮಾಜದಲ್ಲಿ, ಸಾಕ್ಷರತೆ ಬದುಕಿನ ಅಡಿಪಾಯವಾಗಿದೆ. ರಾಜ್ಯದ ಹಲವೆಡೆ, ಕಾರ್ಯಕ್ರಮಗಳು ಜರುಗಿದ ವರದಿ ಬಂದಿವೆ.

<><><>

ಪರಿಸರ ಉಳಿಸು, ಬೆಳೆಸು ಹಾಗೂ ಮಿತವಾಗಿ ಬಳಸು ಎಂಬುದು, ಅಪ್ಪಿಕೋ ಆಂದೋಲನದ ಅಂದಿನ ಧ್ಯೇಯವಾಗಿತ್ತು ಎಂದು, ಅಪ್ಪಿಕೋ ಚಳವಳಿಯ ಪ್ರವರ್ತಕ, ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕು ಗುಬ್ಬಿಗದ್ದೆಯ, ಮಹಾಬಲೇಶ್ವರ ಹೆಗಡೆ ಹೇಳಿದ್ದಾರೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಏರ್ಪಡಿಸಲಾದ, ಸಹ್ಯಾದ್ರಿ 2024, ಚಿಪ್ಕೋ ಆಂದೋಲನಕ್ಕೆ 50, ಅಪ್ಪಿಕೋ ಚಳವಳಿಗೆ 40, ಒಂದು ಮೆಲುಕು', ಹಾಗೂ 'ಅರಣ್ಯಗಳು ಮತ್ತು ಸುಸ್ಥಿರ ಅಭಿವೃದ್ಧಿ' ಕುರಿತ, ಎರಡು ದಿನಗಳ ಚಿಂತನ-ಮಂಥನ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪಶ್ಚಿಮ ಘಟ್ಟದ ಜೀವ ವೈವಿಧ್ಯ ವಿಷಯದ ಬಗ್ಗೆ ವಿಚಾರ ಮಂಡಿಸಿದ, ಪರಿಸರ ತಜ್ಞ, ಸಾಗರದ ಅಖಿಲೇಶ ಚಿಪ್ಪಳಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡರು.

<><><>

ಅಖಿಲೇಶ ಚಿಪ್ಪಳಿ ಧ್ವನಿ 48 ಸೆಕೆಂದುಗಳು

<><><>

ಇಂದು ಮಾಧವ್ ಗಾಡಗೀಳ ವರದಿಯ ಕುರಿತು ವಿಚಾರಗೋಷ್ಠಿ ನಡೆಯಲಿದೆ. ಶಿವಮೊಗ್ಗದ ಪ್ರೊಫೆಸರ್ ಬಿ.ಎಂ ಕುಮಾರಸ್ವಾಮಿ ವಿಚಾರ ಮಂಡಿಸಲಿದ್ದಾರೆ. ಗದಗ ಜಿಲ್ಲೆ ಕಪ್ಪತಗುಡ್ಡ ಅರಣ್ಯ ಸಂರಕ್ಷಣೆ ಕುರಿತು, ಶಿವಕುಮಾರ ಸ್ವಾಮೀಜಿ ಮಾತನಾಡಲಿದ್ದಾರೆ.

<><><>

ಮೌನವೂ ಭಾಷೆಯೇ ಎಂದ, ಖ್ಯಾತ ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರ, ಜನ್ಮ ದಿನವನ್ನು ನಿನ್ನೆ, ವಿಶೇಷವಾಗಿ ಆಚರಿಸಲಾಯಿತು. ಆಧುನಿಕ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ ಹಾಗೂ ಪರಿಸರ ಸಂರಕ್ಷಣೆಯ ಬರೆಹಗಳಿಗೆ, ಹೊಸ ಆಯಾಮ ತಂದು ಕೊಟ್ಟ, ತೇಜಸ್ವಿ ಅವರನ್ನು, ನಾಡು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಿ, ಸ್ಮರಿಸಿತು. 'ತೇಜಸ್ವಿ ಜೀವಲೋಕ' ಕುರಿತ, 12ನೇ ಸಂಚಿಕೆಯ ಸಾಕ್ಷ್ಯಚಿತ್ರವನ್ನು, ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ, ಮಾಜಿ ಸಭಾಪತಿ ಬಿ.ಎಲ್.ಶಂಕರ್ ಲೋಕಾರ್ಪಣೆ ಮಾಡಿದರು.

<><><>

ಮಹಾತ್ಮ ಗಾಂಧೀಜಿ ಅಧ್ಯಕ್ಷತೆವಹಿಸಿದ್ದ, ಬೆಳಗಾವಿಯ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆದು, 100 ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನೆಲೆ, ಬೆಂಗಳೂರು ನಗರದ ಎಲ್ಲ ಶಾಲೆಗಳಲ್ಲಿ, ಗಾಂಧಿ ಜಯಂತಿ ದಿನದಂದು, ಸ್ವಚ್ಛತೆಯ ಪ್ರತಿಜ್ಞಾ ವಿಧಿ ಸ್ವೀಕರಿಸಲಾಗುವುದು ಎಂದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ತಿಳಿಸಿದ್ದಾರೆ. ಬೆಂಗಳೂರಿನ ವೈಯಾಲಿಕಾವಲ್ ಬಿ.ಬಿ.ಎಂ.ಪಿ. ಕಚೇರಿಯಲ್ಲಿ, ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಮಕ್ಕಳಲ್ಲಿ ಸ್ವಚ್ಛತೆ ಮತ್ತು ಪರಿಸರದ ಬಗ್ಗೆ ಕಾಳಜಿ ಮೂಡಿಸಲು, ಈ ಕ್ರಮ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕಲ್ಯಾಣ ಚಾಲುಕ್ಯರ ಆಳ್ವಿಕೆ ಕಾಲದ, ಶಿಲ್ಪಕಲೆಗೆ ಹೆಸರಾದ, ಗದಗ ಜಿಲ್ಲೆ ಲಕ್ಕುಂಡಿ ಗ್ರಾಮದ, ಸಂಪೂರ್ಣ ಅಭಿವೃದ್ಧಿಗೆ ರಾಜ್ಯ ಸರ್ಕಾರ ಬದ್ಧ ಎಂದು, ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದ್ದಾರೆ. ಲಕ್ಕುಂಡಿ ಪಾರಂಪರಿಕ ಪ್ರದೇಶ

ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ, 5 ಕೋಟಿ ರೂಪಾಯಿ ವೆಚ್ಚದಲ್ಲಿ, 13 ಆರಕ್ಷಿತ ಸ್ಮಾರಕಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಶಿಲಾನ್ಯಾಸ ನೆರವೇರಿಸಿ, ಅವರು ಮಾತನಾಡಿದರು.

ಶಾಸಕ ಸಿ.ಸಿ. ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿ, ಪಾರಂಪರಿಕ ಸ್ಮಾರಕಗಳಿಗೆ ಖ್ಯಾತಿವೆತ್ತ ಲಕ್ಕುಂಡಿಯಲ್ಲಿ, 101 ದೇವಾಲಯ, 101 ಬಾವಿಗಳ ಪೈಕಿ, ಸದ್ಯ 30 ದೇವಾಲಯಗಳು ಹಾಗೂ 30 ಬಾವಿಗಳು ಮಾತ್ರ ಕಾಣಸಿಗುತ್ತವೆ. ಅವುಗಳ ರಕ್ಷಣೆಯ ಅಗತ್ಯವಿದೆ ಎಂದರು.

<><><>

ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಖಾತೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಇಂದು, ಬೆಂಗಳೂರಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕುರಿತಂತೆ ಮಹತ್ವದ ಸಭೆ ನಡೆಸಲಿದ್ದಾರೆ. ಬೆಂಗಳೂರಿನ ಗಂಗಾನಗರದ ಖಾಸಗಿ ಹೋಟೆಲ್ ನಲ್ಲಿ, ದಕ್ಷಿಣ ಭಾರತದ ಪ್ರವಾಸೋದ್ಯಮದ ಬೆಳವಣಿಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಜಾರಿಯಲ್ಲಿರುವ ಯೋಜನೆಗಳ ಕುರಿತಂತೆ, ಸಚಿವರು ಪ್ರಗತಿ ಪರಿಶೀಲಿಸಲಿದ್ದಾರೆ.

<><><>

ಕೇಂದ್ರ ಪುರಸ್ಕೃತ ಸಂಪೂರ್ಣತಾ ಅಭಿಯಾನ, ಮಹತ್ವಾಕಾಂಕ್ಷಿ ಘಟಕ ಯೋಜನೆಯಡಿ, ಉತ್ತಮ ಪ್ರಗತಿ ಸಾಧಿಸಿದ, ಕಲಬುರಗಿ ಜಿಲ್ಲೆ ಕಾಳಗಿ ತಾಲೂಕು, ದಕ್ಷಿಣ ಭಾರತದಲ್ಲೇ 2024 ನೇ ಸಾಲಿನ, ಡೆಲ್ಟಾ ಎರಡನೇ ಸ್ಥಾನ ಗಳಿಸಿದೆ. ಕಳೆದ 55 ದಿನಗಳ ಸಂಪೂರ್ಣತಾ ಅಭಿಯಾನದಡಿ, ಕಲಬುರಗಿ ಜಿಲ್ಲೆಯ ಆಶೋತ್ತರ ತಾಲೂಕು ಕಾಳಗಿ, ಒಟ್ಟು 4 ವಿಭಾಗಗಳಲ್ಲಿ 100ರಷ್ಟು ಪ್ರಗತಿ ಸಾಧಿಸಿದೆ. ಕಾಳಗಿ ಆಶೋತ್ತರ ಘಟಕದ ಫೆಲೋ, ಶಿವರಾಜ ಹೋಳ್ಕರ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಶಿವರಾಜ ಹೋಳ್ಕರ ಧ್ವನಿ 40 ಸೆಕೆಂದುಗಳು

<><><>

ಮಹಾರಾಷ್ಟ್ರದ ತಿಲಾರಿ ಅಣೆಕಟ್ಟೆಯಲ್ಲಿ, ನದಿ ದಾಟುವ ತರಬೇತಿ ನಿರತರಾಗಿದ್ದ, ಬೆಳಗಾವಿ ಕಮಾಂಡೋ ಸೆಂಟರ್‌ನ, ಇಬ್ಬರು ಕಮಾಂಡೋಗಳು, ದೋಣಿ ಮುಳುಗಿ ಮೃತಪಟ್ಟ ಘಟನೆ ಜರುಗಿದೆ. ನಾಲ್ವರು ಕಮಾಂಡೋಗಳು ಬದುಕುಳಿದಿದ್ದಾರೆ. ಮೃತಪಟ್ಟ ಕಮಾಂಡೋಗಳನ್ನು, ರಾಜಸ್ಥಾನ ಮೂಲದ, 28 ವರ್ಷದ ವಿಜಯಕುಮಾರ ದಿನವಾಲ್ ಹಾಗೂ ಪಶ್ಚಿಮ ಬಂಗಾಳದ, 26 ವರ್ಷದ ದಿವಾಕರ ರಾಯ್ ಎಂದು ಗುರುತಿಸಲಾಗಿದೆ.

<><><>

ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯ ಸಂಪಾದಕ ಹಾಗೂ ಹಿರಿಯ ಪತ್ರಕರ್ತ ವಸಂತ ನಾಡಿಗೇರ ಇಂದು ಬೆಳಗ್ಗೆ ತೀವ್ರ ಹೃದಯಾಘಾತದಿಂದ, ಬೆಂಗಳೂರಿನಲ್ಲಿ ನಿಧನರಾದರು. ಮೂರೂವರೆ ದಶಕಗಳ ಕಾಲ ಕನ್ನಡ ಪತ್ರಿಕೋದ್ಯಮದಲ್ಲಿ ಅವರು ಅನುಪಮ ಸೇವೆ ಸಲ್ಲಿಸಿದ್ದಾರೆ.

<><><>

ಕನ್ನಡ ನಿಘಂಟು ತಜ್ಞ ರೆವರೆಂಡ್ ಫರ್ಡಿನೆಂಡ್ ಕಿಟೆಲ್ ಅವರ ಪ್ರತಿಮೆ ಅನಾವರಣ ಕಾರ್ಯಕ್ರಮ, ಧಾರವಾಡದ ಕಿಟೆಲ್ ವಿಜ್ಞಾನ ಮಹಾವಿದ್ಯಾಲಯದ ಆವರಣದಲ್ಲಿ, ನಾಳೆ ಬೆಳಗ್ಗೆ 10.30ಕ್ಕೆ ಜರುಗಲಿದೆ. 'ಕನ್ನಡಾಂಬೆಗೆ ಕಿಟೆಲ್‌ರ ಕೊಡುಗೆ' ಕುರಿತ ವಿಶೇಷ ವಿಚಾರ ಸಂಕಿರಣ ಆಯೋಜಿತವಾಗಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು, ರೈಟ್ ರೆವರೆಂಡ್ ಡಾಕ್ಟರ್ ಮಾರ್ಟಿನ್ ಬೋರ್ಗಾಯಿ, ವಹಿಸಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಪುರಾಣ ಪ್ರಸಿದ್ಧ ಕೂಟಾದ್ರಿ ಕ್ಷೇತ್ರ, ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಕುರುಡುಮಲೆ ಗ್ರಾಮದಲ್ಲಿ, ಬ್ರಹ್ಮ ರಥೋತ್ಸವ ಜರುಗಿತು.

<><><>

ದಕ್ಷಿಣಕನ್ನಡ ಜಿಲ್ಲೆಯಾದ್ಯಂತ ಕೆಥೋಲಿಕ್ ಕ್ರಿಶ್ಚಿಯನ್ ಬಾಂಧವರು, ಮೊಂತಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ವಿವಿಧ ಚರ್ಚ್‌ಗಳಲ್ಲಿ ಜರುಗಿದ ಬಲಿಪೂಜೆಯಲ್ಲಿ, ನೂರಾರು ಭಕ್ತರು ಪಾಲ್ಗೊಂಡಿದ್ದರು.

<><><>

ಬಾಗಲಕೋಟೆ ಜಿಲ್ಲೆಯಲ್ಲಿ, ಇಂದಿನಿಂದ, 'ಕಾವೇರಿ 2; ಇ–ಆಸ್ತಿ ತಂತ್ರಾಂಶ' ಜಾರಿಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ಕೆ.ಎಂ. ಜಾನಕಿ ತಿಳಿಸಿದ್ದಾರೆ.

<><><>

ಬೆಳಗಾವಿ ಸುವರ್ಣ ವಿಧಾನಸೌಧಕ್ಕೆ, ಪೂರ್ವ ಆಫ್ರಿಕಾದ ರೊವಾಂಡಾ ದೇಶದ ಹೈಕಮೀಶನರ್ ಜಾಕ್ವೆಲಿನ್ ಮುಕಂಜಿರಾ ಭೇಟಿ ನೀಡಿದರು.

<><><>

ಬಳ್ಳಾರಿ ಸಂಸದ ಈ. ತುಕಾರಾಮ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಭೇಟಿಯಾಗಿ, ಸಂಡೂರು ಕ್ಷೇತ್ರದ ಅಭಿವೃದ್ಧಿ ಕುರಿತು, ಚರ್ಚಿಸಿದರು.

<><><>

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ, ಗಗನಚುಕ್ಕಿ ಜಲಪಾತೋತ್ಸವ ಇದೇ 14 ಮತ್ತು 15 ರಂದು ನಡೆಯಲಿದೆ. ಕಲಾವಿದರು ಹೆಸರು ನೊಂದಾಯಿಸಬಹುದು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 58ನೇ ವಿಶ್ವ ಸಾಕ್ಷರತಾ ದಿನಾಚರಣೆ; ಪ್ರತಿಯೊಬ್ಬರು ಕನಿಷ್ಟ ಓರ್ವರನ್ನು ಸಾಕ್ಷರರಾಗಿಸೋಣ – ಜಗದೀಪ್ ಧನಕರ್, ಕರೆ.
- ಅಪ್ಪಿಕೋ ಆಂದೋಲನದ ಧ್ಯೇಯ; ಪರಿಸರ ಉಳಿಸು, ಬೆಳೆಸು ಹಾಗೂ ಮಿತವಾಗಿ ಬಳಸು – ಗುಬ್ಬಿಗದ್ದೆ ಮಹಾಬಲೇಶ್ವರ ಹೆಗಡೆ.
- ಕಲ್ಯಾಣ ಚಾಲುಕ್ಯರ ಶಿಲ್ಪಕಲೆಯ, ಗದಗ ಜಿಲ್ಲೆ ಲಕ್ಕುಂಡಿ ಗ್ರಾಮದ, ಅಭಿವೃದ್ಧಿಗೆ ಸರ್ಕಾರ ಬದ್ಧ – ಎಚ್.ಕೆ.ಪಾಟೀಲ.
- ಸಂಪೂರ್ಣತಾ ಅಭಿಯಾನ; ಕಲಬುರಗಿ ಜಿಲ್ಲೆಯ ಕಾಳಗಿಯಲ್ಲಿ, 4 ವಿಭಾಗಗಳಲ್ಲಿ 100ರಷ್ಟು, ಪ್ರಗತಿ ಸಾಧನೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಹರ್ಷ**